ನಿರ್ಮಾಣದಲ್ಲಿನ ಅದ್ದೂರಿತನ ಹಾಗೂ ಸಾಹಸ ಮನೋಭಾವದಿಂದಾಗಿ ದ್ವಾರಕೀಶ್ ನಿಜವಾದ ಅರ್ಥದಲ್ಲಿ ಕನ್ನಡ ಚಿತ್ರೋದ್ಯಮದ ಮೊದಲ ಕನಸುಗಾರ! ಅವರು ತಾವಷ್ಟೇ ಕನಸು ಕಾಣಲಿಲ್ಲ, ಕನ್ನಡ ಚಿತ್ರೋದ್ಯಮಕ್ಕೂ ಕನಸು ಕಾಣುವುದನ್ನು ಹೇಳಿಕೊಟ್ಟರು.

ಬಂಗ್ಲೆ ಶಾಮ ರಾವ್ ದ್ವಾರಕೀಶ್ ಮೈಸೂರಿನಲ್ಲಿ ಆಟೊಮೊಬೈಲ್ ವ್ಯಾಪಾರ ಮಾಡಿಕೊಂಡಿದ್ದ ತರುಣ. ಸೋದರಮಾವ ಹುಣಸೂರು ಕೃಷ್ಣಮೂರ್ತಿ ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದ ಕಾರಣವೋ ಏನೋ, ಸಿನಿಮಾ ಸೆಳೆತಕ್ಕೆ ಸಿಲುಕಿ ಮದರಾಸು ಸೇರಿಕೊಂಡ ದ್ವಾರಕೀಶ್, ಮೊದಲು ಬಣ್ಣ ಹಚ್ಚಿದ್ದು 'ವೀರ ಸಂಕಲ್ಪ' (1964) ಚಿತ್ರದಲ್ಲಿ. ಹುಣಸೂರರ ನಿರ್ದೇಶನದ ಆ ಚಿತ್ರದಲ್ಲಿ ಅವರ ಪಾಲಿಗೆ ದೊರೆತದ್ದು ಪುಟ್ಟ ಪಾತ್ರ. ಹಾಗೆಯೇ ನಟನೆಯಲ್ಲೇ ಮುಂದುವರೆದಿದ್ದರೆ ಹಾಸ್ಯಕಲಾವಿದನಾಗಿ ಒಂದಷ್ಟು ಅವಕಾಶಗಳು ದೊರೆಯುತ್ತಿದ್ದವೇನೊ? ಆದರೆ, ಅವರ ವಾಮನಾಕಾಂಕ್ಷೆ ಸಿನಿಮಾ ನಿರ್ಮಾಣದ ಸಾಹಸಕ್ಕೆ ಅವರನ್ನು ಉದ್ದೀಪಿಸಿತು. 'ಮಮತೆಯ ಬಂಧನ' (1966) ಸಿನಿಮಾದ ಸಹ ನಿರ್ಮಾಪಕರಾಗಿ ಗುರ್ತಿಸಿಕೊಂಡ ಅವರು, 'ಮೇಯರ್ ಮುತ್ತಣ್ಣ' (1969) ಸಿನಿಮಾದ ಮೂಲಕ ಪೂರ್ಣ ಪ್ರಮಾಣದ ನಿರ್ಮಾಪಕರಾದರು.

'ಮೇಯರ್ ಮುತ್ತಣ್ಣ' ಸಿನಿಮಾದ ನಿರ್ದೇಶಕ ಸಿದ್ಧಲಿಂಗಯ್ಯ ನಂತರದ ವರ್ಷಗಳಲ್ಲಿ 'ಬಂಗಾರದ ಮನುಷ್ಯ', 'ಬೂತಯ್ಯನಮಗಅಯ್ಯು'ವಿನಂಥಅಪೂರ್ವ ಚಿತ್ರಗಳನ್ನು ಭಾರತೀಯ ಚಿತ್ರರಂಗಕ್ಕೆ ನೀಡಿದವರು. ರಾಜ್‌ಕುಮಾರ್ ಸೋದರ ವರದರಾಜು ಹಾಗೂ ಸಿದ್ಧಲಿಂಗಯ್ಯ ಸ್ನೇಹಿತರು. 'ನೀನು ನಿರ್ಮಾಪಕರನ್ನು ಹೊಂಚಿಕೊಳ್ಳುವುದಾದರೆ, ರಾಜ್‌ಕುಮಾರ್ ಕಾಲ್‌ಶೀಟ್ ಕೊಡಿಸುವೆ' ಎಂದು ವರದರಾಜ್ ಸ್ನೇಹಿತನಿಗೆ ಮಾತು ಕೊಟ್ಟಿದ್ದರು. ರಾಜ್ ಕಾಲ್‌ಶೀಟ್‌ನೊಂದಿಗೆ ನಿರ್ಮಾಪಕರ ಹುಡುಕಾಟದಲ್ಲಿದ್ದ ಸಿದ್ಧಲಿಂಗಯ್ಯನವರಿಗೆ ದ್ವಾರಕೀಶ್ ಜೊತೆಯಾದರು. ಇಬ್ಬರ ಅದೃಷ್ಟವೂ ದೊಡ್ಡದಿತ್ತು. 'ಮೇಯರ್ ಮುತ್ತಣ್ಣ' ಸ್ಟಾರ್ ನಿರ್ದೇಶಕನೊಂದಿಗೆ ತಾರಾ ವರ್ಚಸ್ಸಿನ ನಿರ್ಮಾಪಕನನ್ನೂ ಸೃಷ್ಟಿಸಿತು.

ಹಳ್ಳಿಯಿಂದ ನಗರಕ್ಕೆ ಹೋಗಿ ಮೇಯರ್ ಆಗುವ ಕಥಾನಾಯಕನನ್ನು ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ಈ ಮೆರವಣಿಗೆಯಲ್ಲಿ ದ್ವಾರಕೀಶ್ ತಮ್ಮನ್ನು ತಾವು ಕಂಡುಕೊಂಡಿದ್ದರು. ಸಿನಿಮಾ ಹುಚ್ಚಿನ ಹುಡುಗನನ್ನು ಯಾರು ತಮಾಷೆ ಮಾಡಿದ್ದರೋ ಅವರ ಎದುರಿಗೆ, ಯಾವ ಬೀದಿಗಳಲ್ಲಿ ಕುಳ್ಳನಿಗೆ ಅವಮಾನವಾಗಿತ್ತೋ ಅಲ್ಲಿಯೇ, ಮುತ್ತಣ್ಣನ ಮೆರವಣಿಗೆಯ ಚಿತ್ರೀಕರಣವನ್ನು ದ್ವಾರಕೀಶ್ ನಡೆಸಿದ್ದರು. ಮೊದಲ ಚಿತ್ರದ ಗೆಲುವು ಅವರಿಗೆ ಅವಮಾನವನ್ನು ನೀಗಿಸುವುದರ ಜೊತೆಗೆ ಆತ್ಮವಿಶ್ವಾಸವನ್ನೂ ತಂದುಕೊಟ್ಟಿತು.

ದ್ವಾರಕೀಶ್‌ರ ಸಾಹಸ ಪ್ರವೃತ್ತಿ ನೋಡಿ. 'ಮೇಯರ್ ಮುತ್ತಣ್ಣ' ಚಿತ್ರದ ಯಶಸ್ಸಿನ ನಂತರ ಅವರು ಮತ್ತೊಬ್ಬ ನಾಯಕನಟನನ್ನು ನೆಚ್ಚಿ ಸಿನಿಮಾ ನಿರ್ಮಿಸುವ ಗೋಜಿಗೆ ಹೋಗಲಿಲ್ಲ. ತಮ್ಮನ್ನೇ ನಾಯಕನನ್ನಾಗಿ ಘೋಷಿಸಿಕೊಂಡರು. 'ಕುಳ್ಳ ಏಜೆಂಟ್ 000' (1972), ನಂತರದ 'ಕೌಬಾಯ್ ಕುಳ್ಳ' (1973) ಕನ್ನಡ ಚಿತ್ರರಂಗಕ್ಕೊಬ್ಬ ವಾಮನ ನಾಯಕನನ್ನು ಪರಿಚಯಿಸಿದವು. ಆಕಾರ ಕುಳ್ಳಷ್ಟೇ; ಎರಡೂ ಸಿನಿಮಾಗಳದು ದೊಡ್ಡ ಗೆಲುವು.

ಕುಳ್ಳನಾಗಿ ವ್ಯಾಪಾರ ಹೆಚ್ಚು ಕಾಲ ಗಿಟ್ಟುವುದಿಲ್ಲ ಎನ್ನುವ ಲೆಕ್ಕಾಚಾರದೊಂದಿಗೆ ದ್ವಾರಕೀಶ್



ತಮ್ಮೊಂದಿಗೆ 'ಕಳ್ಳ'ನೊಬ್ಬನನ್ನು ಸೇರಿಸಿಕೊಂಡರು. ವಿಷ್ಣುವರ್ಧನ್–ದ್ವಾರಕೀಶ್‌ರ ಕಳ್ಳ–ಕುಳ್ಳ ಜೋಡಿ ಕನ್ನಡ ಚಿತ್ರರಸಿಕರನ್ನು ಮರುಳು ಮಾಡಿತು. 'ಕಳ್ಳ ಕುಳ್ಳ', 'ಕಿಟ್ಟು ಪುಟ್ಟು' ಚಿತ್ರಗಳ ಜೊತೆಗೆ, 'ಸೊಸೆ ತಂದ ಸೌಭಾಗ್ಯ', 'ಗಲಾಟೆ ಸಂಸಾರ', 'ಗುರು ಶಿಷ್ಯರು', 'ಇಂದಿನ ರಾಮಾಯಣ', 'ಮನೆ ಮನೆ ಕಥೆ' ಸೇರಿದಂತೆ ಹಲವು ಸಿನಿಮಾಗಳಲ್ಲಿ ಈ ಜೋಡಿ ಗೆಲುವು ಕಂಡಿತು.

ಹೊರಾಂಗಣ ಚಿತ್ರೀಕರಣವೇ ದುಬಾರಿ ಎನ್ನುವಂಥ ದಿನಗಳಲ್ಲಿ ತಮ್ಮ ಸಿನಿಮಾಗಳನ್ನು ವಿದೇಶಗಳಲ್ಲಿ ಚಿತ್ರೀಕರಿಸಿದ್ದು ದ್ವಾರಕೀಶ್‌ರ ಸಾಹಸಿ ಮನೋಭಾವ ಹಾಗೂ ಪ್ರಯೋಗಶೀಲ ಲೆಕ್ಕಾಚಾರಕ್ಕೆ ತಕ್ಕಂತಿತ್ತು. 'ಸಿಂಗಪುರದಲ್ಲಿ ರಾಜಾ ಕುಳ್ಳ' ಹಾಗೂ 'ಆಫ್ರಿಕಾದಲ್ಲಿ ಶೀಲಾ' ಸಿನಿಮಾಗಳ ಶೀರ್ಷಿಕೆಗಳೇ ಅವುಗಳ ವಿದೇಶಿ ನಂಟನ್ನು ಹೇಳುವಂತಿವೆ.

ವಿದೇಶದಲ್ಲಿ ಸಿನಿಮಾ ಚಿತ್ರೀಕರಣ ನಡೆಸಿದ ಮೊದಲ ನಿರ್ಮಾಪಕ ಎನ್ನುವ ಅಗ್ಗಳಿಕೆಯ ದ್ವಾರಕೀಶ್ ಅವರಿಗೆ ವ್ಯಾಪಾರಿ ಲೆಕ್ಕಾಚಾರ ಕೈಕೊಟ್ಟಿರುವುದೂ ಇದೆ. ಕನ್ನಡ ಚಿತ್ರರಂಗದಲ್ಲಿ ಯಶಸ್ಸಿನ ಉತ್ತುಂಗದಲ್ಲಿದ್ದಾಗ ಅವರು ನಿರ್ಮಿಸಿದ ಹಿಂದಿ ಹಾಗೂ ತಮಿಳು ಸಿನಿಮಾಗಳು ಕೈಕಚ್ಚಿದವು. ರಜನಿಕಾಂತ್‌ರಂಥ ಸ್ಟಾರ್ ಜೊತೆ ಕೆಲಸ ಮಾಡಿದ್ದೂ ಆರ್ಥಿಕವಾಗಿ ಲಾಭದಾಯಕವೆನ್ನಿಸಲಿಲ್ಲ.

'ರೀಮೇಕ್‌ರಾಜ' ಎನ್ನುವ ವಿಶೇಷಣ ದ್ವಾರಕೀಶ್‌ರ ಖ್ಯಾತಿಯೂ ಹೌದು, ಅಪಖ್ಯಾತಿಯೂ ಹೌದು. 'ಮೇಯರ್ ಮುತ್ತಣ್ಣ'ದಂಥ ಅಪ್ಪಟ ಕನ್ನಡ ಮಣ್ಣಿನ ಕಥನದಿಂದ ನಿರ್ಮಾಪಕನಾಗಿ ವೃತ್ತಿಜೀವನ ಆರಂಭಿಸಿದ ಅವರು, ನಂತರದಲ್ಲಿ ಬಹುತೇಕ ದೊಡ್ಡ ಯಶಸ್ಸು ಕಂಡಿದ್ದೆಲ್ಲ ಕಡ ತಂದ ಕಥೆಗಳಲ್ಲೇ. ರೀಮೇಕ್‌ಗಳ ನಡುವೆಯೂ ಗಿರೀಶ ಕಾರ್ನಾಡರು ಪ್ರಮುಖ ಪಾತ್ರದಲ್ಲಿ ನಟಿಸಿದ್ದ 'ಆನಂದ ಭೈರವಿ'ಯಂಥ ಭಿನ್ನ ಚಿತ್ರವನ್ನು ರೂಪಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಶ್ರುತಿ, ವಿನೋದ್‌ರಾಜ್, ಸುನೀಲ್‌ರಂಥ ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸಿದ ಹಿರಿಮೆಯೂ ಅವರದೇ.

ನಟ, ನಿರ್ಮಾಪಕ ಹಾಗೂ ನಿರ್ದೇಶಕನಾಗಿ ಸುಮಾರು ಏಳು ದಶಕಗಳ ಕಾಲ ಸಕ್ರಿಯರಾಗಿದ್ದ ದ್ವಾರಕೀಶ್ ಹಾಗೂ ವಿಷ್ಣುವರ್ಧನ್ ನಡುವಣ ಸ್ನೇಹ ಸಿನಿಮಾ ಸಂಬಂಧವನ್ನು ಮೀರಿತ್ತು. ಯಶಸ್ಸಿನ ಸಹಪಯಣದ ನಡುವೆ ಇಬ್ಬರ ನಡುವೆ ಜಗಳಗಳಿದ್ದವು. ಮುನಿಸು ಮರೆತು ಇಬ್ಬರೂ ಜೊತೆಯಾದಾಗ 'ಆಪ್ತಮಿತ್ರ'ದಂಥ ಯಶಸ್ವಿ ಚಿತ್ರ ರೂಪುಗೊಂಡಿತು. ಈ ಚಿತ್ರದ ಸೀಕ್ವೆಲ್ 'ಆಪ್ತರಕ್ಷಕ' (2010) ವಿಷ್ಣು ನಾಯಕನಾಗಿ ನಟಿಸಿದ ಕೊನೆಯ ಚಿತ್ರ. ಈ ಚಿತ್ರದಲ್ಲಿನ ನಟನೆಗಾಗಿ ವಿಷ್ಣು ಅವರಿಗೆ 'ಅತ್ಯುತ್ತಮ ನಟ' ರಾಜ್ಯಪ್ರಶಸ್ತಿ ಮರಣೋತ್ತರವಾಗಿ ದೊರೆತಾಗ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದುದು ದ್ವಾರಕೀಶ್ ಅವರೇ. ಅವರ ಕೊನೆಯ ಚಿತ್ರಗಳಲ್ಲೊಂದಾದ 'ವಿಷ್ಣುವರ್ಧನ' ಸಿನಿಮಾದ ಶೀರ್ಷಿಕೆ ಗೆಳೆತನದ ನಂಟನ್ನು ನೆನಪಿಸುವಂತಿತ್ತು.

'ಮೇಯರ್ ಮುತ್ತಣ್ಣ' ಮೂಲಕ ವೃತ್ತಿಜೀವನ ಆರಂಭಿಸಿದ ದ್ವಾರಕೀಶ್, ನಂತರದಲ್ಲಿ ರಾಜಕುಮಾರ್ ಜೊತೆ ಕೆಲಸ ಮಾಡಿದ್ದು 'ಭಾಗ್ಯವಂತರು' ಸಿನಿಮಾದಲ್ಲಿ ಮಾತ್ರ. ರಾಜ್ ಜೊತೆ ಹೆಚ್ಚು ಕೆಲಸ ಮಾಡದೆ ಹೋದ ನಿರಾಶೆ ದ್ವಾರಕೀಶ್ ಅವರಲ್ಲಿತ್ತು.

ಸಿನಿಮಾಗಳ ಮೂಲಕ ಯಶಸ್ಸಿನ ಉತ್ತುಂಗ ಕಂಡಂತೆಯೇ ಸೋಲಿನ ಕಣಿವೆಯನ್ನೂ ದ್ವಾರಕೀಶ್ ಕಂಡಿದ್ದರು. ಸೋಲುಗೆಲುವುಗಳು ಅವರ ಸಿನಿಮಾಪ್ರೀತಿಯನ್ನು ಕೊಂಚವೂ ಮುಕ್ಕಾಗಿಸಿರಲಿಲ್ಲ. ದ್ವಾರಕೀಶ್ ನಿರ್ಗಮನದೊಂದಿಗೆ ಕನ್ನಡ ಚಿತ್ರರಂಗದ ವರ್ಣರಂಜಿತ ಅಧ್ಯಾಯವೊಂದು ಕೊನೆಗೊಂಡಿದೆ.

ಪ್ರತಿಕ್ರಿಯಿಸಿ: **feedback@sudha.co.in**